SC No.192/2024
PW. 3, CW.5

ದಿನಾಂಕ: 11-12-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು:ಆರೋಪಿತರ ಪರ ಶ್ರೀ.ಎಸ್.ಟಿ.ಕೆ ವಕೀಲರಿಂದ**

ಚಾಸಾಃ 10 ನನ್ನ ಚಿಕ್ಕಪ್ಪನ ಮಗಳು. ನಮ್ಮ ಮನೆ, ನಮ್ಮ ಚಿಕ್ಕಪ್ಪನ ಮನೆಯಿಂದ ಸ್ವಲ್ಪ ದೂರದಲ್ಲಿದೆ. ಸುರೇಶ ಎನ್ನುವವರು ನನ್ನ ತಂಗಿ ರಾಜಶ್ರೀ ಅವರಿಗೆ ಕಾಡಿಸುತ್ತಿದ್ದ ವಿಚಾರ ಮೊದಲು ನನಗೆ ಗೊತ್ತಿರಲಿಲ್ಲ, ನಮ್ಮ ಮಾಮಾ ಚಾಸಾಃ 9 ರವರು ಹೇಳಿದ ನಂತರವೇ ನನಗೆ ಗೊತ್ತಾಗಿರುತ್ತದೆ. ನಾನು 9 ನೇ ತರಗತಿಯವರೆಗೆ ವಿದ್ಯಭ್ಯಾಸ ಮಾಡಿರುತ್ತೇನೆ.

2. ನಾನು ಮತ್ತು ಚಾಸಾಃ 1 ರವರು ಸುರೇಶನನ್ನು ಮೋಟರಸೈಕಲನಲ್ಲಿ ಕರೆದುಕೊಂಡು ಹೋಗುವ ಮೊದಲು ನಿಮ್ಮ ತಂಗಿಗೆ ಫೋನ ಮಾಡಿ ಕಾಡಿಸುತ್ತಿದ್ದ ವಿಚಾರವನ್ನು ಹಿರಿಯರಿಗೆ ಹೇಳಿ ಆತನಿಗೆ ತಿಳುವಳಿಕೆ ಹೇಳುವ ಪ್ರಯತ್ನ ಮಾಡಿದ್ದೀರಾ ಎನ್ನುವುದಕ್ಕೆ ಸಾಕ್ಷಿ ಆ ರೀತಿ ಬುದ್ಧಿ ಹೇಳಿಸುವ ಸಲುವಾಗಿ ಆತನನ್ನು ಕರೆದುಕೊಂಡು ಹೋಗಿದ್ದೇವೆ ಎಂದು ಹೇಳಿದ್ದಾರೆ. ನಾವು ಸುರೇಶನನ್ನು ಹೊಡೆಯಲು ಕರೆದುಕೊಂಡು ಹೋಗಿರಲಿಲ್ಲ. ನೀವು ಸುರೇಶನ ತಂದೆ, ತಾಯಿ, ಅಣ್ಣ ತಮ್ಮಂದಿರಿಗೆ ವಿಚಾರ ಹೇಳಿದ್ದೀರಾ ಎನ್ನುವುದಕ್ಕೆ ಸಾಕ್ಷಿ ಹೇಳಿರುವುದಿಲ್ಲ ಆತನಿಗೆ ಬುದ್ಧಿ ಹೇಳಬೇಕು ಎಂದು ಕರೆದುಕೊಂಡು ಹೋಗಿದ್ದೇವು ಎಂದು ಉತ್ತರಿಸಿದ್ದಾರೆ.

**ಪ್ರಶ್ನೆಃ** ಒಬ್ಬ ವ್ಯಕ್ತಿಯನ್ನು ಒತ್ತಾಯಪೂರ್ವಕವಾಗಿ ಅವರ ಮನೆಯವರಿಗೆ ವಿಚಾರ ತಿಳಿಸದೇ ಕರೆದುಕೊಂಡು ಹೋಗುವುದು ನಿಮಗೆ ತಪ್ಪು ಎಂದು ಅನಿಸಿತ್ತೇ ?
**ಉತ್ತರಃ** ಆತನು ನಮ್ಮ ತಂಗಿಗೆ ಫೋನ ಮಾಡಿ ಕಾಡಿಸುತ್ತಿದ್ದುದರಿಂದ ಆತನಿಗೆ ತಾಕಿತ್ತು ಮಾಡುವ ಸಲುವಾಗಿ ಕರೆದುಕೊಂಡು ಹೋಗಿದ್ದೇವು ಎಂದು ಹೇಳಿದ್ದಾರೆ.

3. ನಿಮ್ಮ ತಂಗಿಯ ಫೋನನ್ನು ತೆಗೆದು ವೈಯಕ್ತಿಕವಾಗಿ ನೀವು ಪರೀಕ್ಷೆ ಮಾಡಿದ್ದೀರಾ ಎನ್ನುವುದಕ್ಕೆ ಸಾಕ್ಷಿ ನಮ್ಮ ತಂಗಿಯ ಗಂಡ ಹೇಳಿದ್ದರಿಂದ ನನಗೆ ಗೊತ್ತಾಗಿದೆ ಎಂದು ಹೇಳಿದ್ದಾರೆ. ನಾವು ಸುರೇಶನನ್ನು ಮನೆಯ ಬಳಿ ಇರುವ ಹೊಲದಲ್ಲಿ ಕೂರಿಸಿದ್ದೇವು. ಆ ಹೊಲದಲ್ಲಿ ಬೆಳೆ ಇರಲಿಲ್ಲ, ಖಾಲಿ ಇತ್ತು.

4. ನೀವು ಸುರೇಶನಿಗೆ ಎಷ್ಟು ಹೊತ್ತು ತಾಕಿತ್ತು ಮಾಡಿದ್ದೀರಿ ಮತ್ತು ಯಾರು ಯಾರು ತಾಕಿತ್ತು ಮಾಡಿದ್ದೀರಿ ಎನ್ನುವುದಕ್ಕೆ ಸಾಕ್ಷಿ ತಾಕಿತ್ತು ಮಾಡಲು ಕರೆದುಕೊಂಡು ಹೋಗಿದ್ದೇವು ಅಷ್ಟರಲ್ಲಿ ಮನೆಯ ಬಳಿ ಶಬ್ದ ಕೇಳಿದ್ದರಿಂದ ನಾವು ಅಲ್ಲಿಗೆ ಹೋಗಿದ್ದೇವೆ ಎಂದು ಹೇಳಿದ್ದಾರೆ.

5. ನಾವು ನಮ್ಮ ಮನೆಯ ಬಳಿ ಹೋದಾಗ ನಮ್ಮ ಚಿಕ್ಕಪ್ಪ ಮತ್ತು ಆರೋಪಿತರು ಮಾತ್ರ ಇದ್ದರು ಬೇರೆ ಯಾರೂ ಇರಲಿಲ್ಲ. ನಾವು ಮನೆಯ ಕಡೆಗೆ ಬಂದಾಗ ಸುರೇಶ ಅವರ ಬಳಿ ನಮ್ಮ ಚಿಕ್ಕಪ್ಪಂದಿರು ಆತನಿಗೆ ಬುದ್ಧಿ ಹೇಳುವ ಸಲುವಾಗಿ ಇದ್ದರು.

6. ಆರೋಪಿತರು ಸುರೇಶನನ್ನು ಬಿಡುವಂತೆ ನಮಗೆ ಮನವಿ ಮಾಡುತ್ತಿದ್ದರು, ಆಗ ನಾವುಗಳು ಆರೋಪಿತರ ಮೇಲೆ ಹಲ್ಲೆ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ಆರೋಪಿತರೇ ನಮ್ಮ ಚಿಕ್ಕಪ್ಪನ ಮೇಲೆ ಹಲ್ಲೆ ಮಾಡಿದ್ದಾರೆ, ಅವರ ತಲೆಗೆ ಗಾಯ ಆಗಿರುತ್ತದೆ ಎಂದು ಹೇಳಿದ್ದಾರೆ. ಅದೇ ದಿನ ಪೋಲಿಸರು ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿ ವಿಚಾರಣೆ ಮಾಡಿದ್ದಾರೆ. ಆರೋಪಿತರು ನಮಗೆ ಹೊಡೆದು ನಮ್ಮ ಮೇಲೆ ದೂರು ಕೊಟ್ಟಿದ್ದರಿಂದ ಆ ದಿನ ಪೋಲಿಸರು ಮಲ್ಲಪ್ಪ ಮಾಳಿ, ಚಾಸಾಃ 8 ಅಪ್ಪು ಮಾಳಿ, ಚಾಸಾಃ 7 ಬಸಪ್ಪ ಮಾಳಿ ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿ ಇರಿಸಿಕೊಂಡಿದ್ದರು. ನಾವು ಠಾಣೆಯಲ್ಲಿದ್ದಾಗ ಆರೋಪಿತರು ನಮ್ಮ ಮೇಲೆ ದೂರು ಕೊಟ್ಟಿದ್ದಾರೆ ಎನ್ನುವ ವಿಚಾರ ಗೊತ್ತಾಯಿತು ಎನ್ನುವುದು ಸರಿ.

7. ಆರೋಪಿತರು ನಮ್ಮ ಮೇಲೆ ದೂರು ಕೊಟ್ಟಿರುವುದರಿಂದ ನಾವೂ ಸಹ ಅವರ ಮೇಲೆ ದೂರು ಕೊಡಬೇಕು ಎನ್ನುವ ಸಲುವಾಗಿ ನೀವು ಮತ್ತು ನಿಮ್ಮ ಮನೆಯವರು ವಿಚಾರ ಮಾಡಿ ನಂತರ ಪ್ರತಿ ದೂರು ಕೊಟ್ಟಿರುತ್ತೀರಿ ಎನ್ನುವುದಕ್ಕೆ ಸಾಕ್ಷಿ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿ ನಮ್ಮ ಮೇಲೆ ದೂರು ಕೊಟ್ಟಿರುವ ಕಾರಣ ನಾವು ದೂರು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ.

8. ನಾವು ಸುರೇಶ ಎನ್ನುವವರನ್ನು ಅಪಹರಣ ಮಾಡಿಕೊಂಡು ಹೋಗಿ ಆತನ ಮೇಲೆ ಹಲ್ಲೆ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ನಾವು ಆತನಿಗೆ ಬುದ್ಧಿ ಹೇಳಲು ಕರೆದುಕೊಂಡು ಹೋಗಿದ್ದೇವೆ ಎಂದು ಹೇಳಿದ್ದಾರೆ. ಆರೋಪಿತರು ಸುರೇಶನನ್ನು ಬಿಡಿ ಎಂದು ಮನವಿ ಮಾಡಲು ಬಂದಿದ್ದಾಗ ನಾನು, ಚಾಸಾಃ 6 ರಿಂದ ಚಾಸಾಃ 8 ರವರು ಸೇರಿಕೊಂಡು ಆರೋಪಿತರ ಮೇಲೆ ಹಲ್ಲೆ ಮಾಡಿದ್ದೇವೆ ಎನ್ನುವುದು ಸರಿಯಲ್ಲ.

9. ನಾವು ಆರೋಪಿತರಿಗೆ ಹಲ್ಲೆ ಮಾಡುವಾಗ ನಮ್ಮ ಚಿಕ್ಕಪ್ಪ ಮಧ್ಯೆ ಬಂದು ಹೊಡಿಬೇಡಿ ಎಂದು ಹೇಳುತ್ತಿದ್ದಾಗ ಆದ ಗಲಾಟೆಯಲ್ಲಿ ರಾಗೋಲನಿಂದ ಅವರ ತಲೆಗೆ ತಗುಲಿ ಗಾಯ ಆಗಿದೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿ ಸುನೀಲ ಗಾಡಿವಡ್ಡರ ಅವರು ಬಡಿಗೆಯಿಂದ ನಮ್ಮ ಚಿಕ್ಕಪ್ಪನ ತಲೆಗೆ ಹೊಡೆದು ಗಾಯ ಮಾಡಿದ್ದಾರೆ ಎಂದು ಹೇಳಿದ್ದಾರೆ.

10. 1 ನೇ ಆರೋಪಿ ಸುನೀಲ ಗಾಡಿವಡ್ಡರ ಬಡಿಗೆಯಿಂದ ನನ್ನ ಚಿಕ್ಕಪ್ಪ ಅವರ ತಲೆಗೆ ಹೊಡೆದರು, ಆರೋಪಿತರೆಲ್ಲರೂ ಸೇರಿ ನನಗೆ ಕೈಯಿಂದ ಹೊಡೆಬಡೆ ಮಾಡಿದರು ಎಂದು, ನನಗೆ ಒಳಪೆಟ್ಟು ಆಯಿತು ಎಂದು, ಚಾಸಾಃ 1 ರವರಿಗೆ ಕೈಯಿಂದ ಹೊಡೆಬಡೆ ಮಾಡಿ ಕಾಲನ್ನು ತಿರುಚಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

11. ಮು.ಮಾ.1 ಸಾಮಾನ್ಯವಾಗಿ ಎಲ್ಲಾ ರೈತರ ಮನೆಗಳಲ್ಲಿ ಕೃಷಿ ಕೆಲಸಕ್ಕೆ ಮತ್ತು ಚಪ್ಪರ ಹಾಕಲು ಬಳಸುತ್ತಾರೆ ಎನ್ನುವುದಕ್ಕೆ ಸಾಕ್ಷಿ ಅದನ್ನು ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿ ಅದನ್ನು ಸ್ಥಳದಲ್ಲಿ ಬಿಸಾಡಿ ಹೋಗಿದ್ದರು ಎಂದು ಹೇಳಿದ್ದಾರೆ. ಗಲಾಟೆಯಲ್ಲಿ ನನಗೆ ಸಣ್ಣ ಪುಟ್ಟ ಗಾಯ ಆಗಿತ್ತು ರಕ್ತ ಬಂದಿರುವುದಿಲ್ಲ ಆದರೆ ಒಳಪೆಟ್ಟು ಆಗಿತ್ತು. ಆ ಕಾರಣ ನಾನು ವೈದ್ಯರ ಬಳಿ ಹೋಗಿರುವುದಿಲ್ಲ. ನನಗೆ ಯಾವುದೇ ಗಾಯ ಆಗಿರುವುದಿಲ್ಲ, ಆ ಕಾರಣ ನಾನು ವೈದ್ಯರ ಬಳಿ ಹೋಗಿಲ್ಲ, ಚಿಕಿತ್ಸೆ ಪಡೆದಿಲ್ಲ, ಆದರೂ ಸಹ ನನಗೆ ಗಾಯ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

12. ನಾನು ಈ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.